ಒಪ್ಪದೇ ಇದ್ದರೆ ನಿನ್ನ ಮೇಲೆ ನೀನು ಅಥವಾ ನನ್ನ ಬುದ್ಧಿವಂತಿಕೆಯ ಬಗ್ಗೆ ಅನುಮಾನಪಡಬಾರದು. ನಾನೇನು ಪರಿಪೂರ್ಣ ಮನುಷ್ಯನಲ್ಲ. ನನ್ನ ತಪ್ಪುಗಳ ವಿಚಾರದಲ್ಲಿ ಯಾಕೆ ನೀನು ನನ್ನ ಕಣ್ಣಲ್ಲಿ ಕಣ್ಣಿಟ್ಟು ನೋಡಬೇಕು? ಅದು ಕುರುಡು ನಂಬಿಕೆ. ನನ್ನ ಮೇಲೆ ನೀನು ಇಟ್ಟಿರುವ ನಂಬಿಕೆಯಿಂದಾಗಿ ಒಬ್ಬ ತಪ್ಪು ಹುಡುಕುವ ವ್ಯಕ್ತಿಗಿಂತ ವೇಗವಾಗಿ ನನ್ನ ನಿಜವಾದ ತಪ್ಪನ್ನು ಹುಡುಕಲು ನಿನಗೆ ಸಾಧ್ಯವಾಗಬೇಕು. ನನ್ನ ತಪ್ಪಿನ ಬಗ್ಗೆ ನನಗೇ ಮನವರಿಕೆ ಮಾಡದೇ ಇದ್ದಾಗ, ನಾನು ಯೋಚನೆ ಮಾಡುವ ಮತ್ತು ಅನುಭವಿಸಿದ ವಿಚಾರಗಳಲ್ಲಿ ನನಗಿಂತ ಹೆಚ್ಚು ಸ್ಪಷ್ಟವಾಗಿ ನೀನೇ ನೋಡುವ ಸಾಧ್ಯತೆಯಿರುತ್ತದೆ. ಹಾಗೆ ಯೋಚಿಸುವ ನಿನ್ನ ನಂಬಿಕೆ ನನಗೆ ಇಷ್ಟ. ಅದರಿಂದ ನಿನಗೆ ನೆಮ್ಮದಿ ಸಿಗುತ್ತದೆ. ಹಾಗಾಗಿ ಕೆಲವು ನಿರ್ದಿಷ್ಟ ವಿಚಾರಗಳಲ್ಲಿ ನನ್ನ ಅಭಿಪ್ರಾಯಗಳನ್ನು ಒಪ್ಪಲು ಸಾಧ್ಯವಿಲ್ಲದೇ ಇದ್ದಾಗ ನಿನ್ನ ಅನುಮಾನಗಳನ್ನು ನಿಗ್ರಹಿಸಿ ನಿನಗೆ ನೀನೇ ಹಿಂಸೆಪಟ್ಟುಕೊಂಡು ನಿನ್ನ ಯೋಚನೆಗಳು ದುರ್ಬಲಗೊಳ್ಳುವಂತೆ ಮಾಡಬಾರದು. ಆದ್ದರಿಂದ ಆಶ್ರಮದ ಬಗ್ಗೆ ನನ್ನೆಲ್ಲ ಚಿಂತನೆಗಳನ್ನು ಸ್ಪಷ್ಟವಾಗಿ ಗ್ರಹಿಸುವ ತನಕ ಅದಕ್ಕೆ ಸಂಬಂಧಿಸಿದ ಚರ್ಚೆಯನ್ನು ನೀನು ನಡೆಸುತ್ತಿರಬೇಕು.

ಯಾವ ಮನುಷ್ಯನೂ ಅತ್ಯಂತ ಕೆಟ್ಟ ಪಾಪಿ ಎಂದು ನೀನು ವಾದ ಮಾಡಬೇಕಾದ ಅಗತ್ಯವಿರುವುದಿಲ್ಲ. ಈ ವಿಚಾರದಲ್ಲಿ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ ನನ್ನ ಬಹುತೇಕ ಮಿತ್ರರ ವಿರುದ್ಧವೂ ನಾನು ಅಂತಹುದೇ ಅಭಿಪ್ರಾಯವನ್ನು ಹೊಂದಿದ್ದೇನೆ. ಸಹಜವಾಗಿ, ವಿವೇಚನಾರಹಿತ ಸೃಷ್ಟಿಗೂ ಮಿಗಿಲಾದ ಮನುಷ್ಯನ ಶ್ರೇಷ್ಠತೆ ಯಾವುದಾದರೂ ಇದ್ದರೆ ಅದು ಬ್ರಹ್ಮಚರ್ಯವನ್ನು ಪಾಲಿಸುವ ಸಾಮರ್ಥ್ಯದಲ್ಲಿ ಎಂಬ ನಿನ್ನ ಮಾತನ್ನೂ ನಾನು ಒಪ್ಪುತ್ತೇನೆ. ಹಾಗಾಗಿ ಅದನ್ನು ಸಾಧಿಸಲು ಆಶ್ರಮವು ಉತ್ಕೃಷ್ಟ ತಾಣವಾಗಬೇಕು. ಆಶ್ರಮದ ಮೂಲಭೂತ ವಿಚಾರಗಳಿಗೆ ಸಂಬಂಧಪಟ್ಟಂತೆ ನಮ್ಮ ನಡುವೆ ಸಂಪೂರ್ಣ ಒಪ್ಪಂದವಿರಬೇಕು ಎಂದು ಬಯಸುತ್ತೇನೆ. ನಮ್ಮ ಆದರ್ಶದ ಮಾರ್ಗಗಳು ಮತ್ತು ಸಂಗತಿಗಳಿಂದ ವಿಮುಖವಾದಾಗ ಮಾತ್ರ ತೊಂದರೆ ಮತ್ತು ಭಿನ್ನಾಭಿಪ್ರಾಯ ಉಂಟಾಗುತ್ತದೆ. ಹೊಸ ಪ್ರವೇಶಾತಿಗಳನ್ನು ನಿಯಂತ್ರಿಸಲು ನೇಜರ್‌ಗೆ ಸಂಪೂರ್ಣ ಸ್ವಾತಂತ್ರ್ಯ ನೀಡುವುದರೊಂದಿಗೆ ಇದು ಅನೂಚಾನವಾಗಿ ನಡೆಯಬೇಕು ಎಂಬುದು ನನ್ನ ಸ್ಪಷ್ಟ ಅಭಿಪ್ರಾಯವಾಗಿದೆ.

ನಮ್ಮ ಬದುಕು ದಿನದಿಂದ ದಿನಕ್ಕೆ ಸರಳವಾಗಬೇಕೇ ಹೊರತು ಸಂಕೀರ್ಣಗೊಳ್ಳಬಾರದು. ನಾವು ಹಂತಹಂತವಾಗಿ ಹೆಚ್ಚು ಹೆಚ್ಚು ಸ್ವಯಂ-ನಿಯಂತ್ರಣಕ್ಕೆ ಒಳಗಾಗಬೇಕು. ನಾವು ಈಗಿರುವಂತೆ ಯಾವತ್ತೂ ಸಂಘಟಿತ ಕುಟುಂಬವಾಗಿಯೇ ಇರಬೇಕು.

ಈಗ ಇರುವ ಸಂರಚನೆಯಿಂದ ತೊಂದರೆಯೇನೂ ಇಲ್ಲ. ಅಡ್ಡಿಯಾಗಿರುವುದು ಏನೆಂದರೆ ನಾವು ಕೆಲವೇ ಕೆಲವು ಶುದ್ಧ ಪರಿಪೂರ್ಣ ಬ್ರಹ್ಮಚಾರಿಗಳಿರುವುದು. ಎಲ್ಲರೂ ಒಡೆದ ಪಾತ್ರೆಗಳಾಗಿದ್ದಾರೆ. ಎಲ್ಲರಿಗೂ ನಿಗ್ರಹಿಸಲು ತಮ್ಮದೇ ಆದ ವೈಯಕ್ತಿಕ ಮೋಹಗಳಿದ್ದವು. ಆದರೆ ನಾನು ಅವುಗಳಲ್ಲಿ ಬಹಳಷ್ಟನ್ನು ಕಾಯ್ದುಕೊಂಡು ಬಂದಿದ್ದೇನೆ ಮತ್ತು ಪ್ರಾಮಾಣಿಕ ಹೋರಾಟ ಮಾಡುತ್ತಿದ್ದೇನೆ. ಹಾಗಾಗಿ ನಾವೆಲ್ಲ ಅಂಧರ ಕುರುಡು ನಾಯಕರಾಗಿದ್ದೇವೆ ಮತ್ತು ಎಡವಿ ಬೀಳುತ್ತಲೇ ಇದ್ದೇವೆ. ನಮ್ಮಲ್ಲಿ ಕೆಲವರು ನಿರಂತರ ಪ್ರಯತ್ನದಿಂದ ಕನಿಷ್ಠ ಜ್ಞಾನವನ್ನು ಪಡೆಯುತ್ತಾರೆ, ನಾವು ನಿಶ್ಚಿತವಾಗಿ ಅದಕ್ಕಿಂತ ಉತ್ತಮ ಪ್ರಯತ್ನ ಮಾಡಬಹುದು. ನಮ್ಮಲ್ಲಿ ಪ್ರತಿಯೊಬ್ಬರೂ ಆದರ್ಶಕ್ಕಾಗಿ ಕಠಿಣ ಪ್ರಯತ್ನ ಮಾಡುತ್ತಿರುವುದರಿಂದ ಸಮಸ್ಯೆಗಳು ತನ್ನಷ್ಟಕ್ಕೆ ತಾನೇ ಪರಿಹಾರ ಕಾಣುತ್ತವೆ.

ಬ್ರಹ್ಮಚರ್ಯದಬಗ್ಗೆನಾನುಮಾಡಿದವ್ಯಾಖ್ಯಾನವನ್ನು ನೆನಪು ಮಾಡಿಕೊ. ಬ್ರಹ್ಮಚರ್ಯವೆಂದರೆ ಒಂದು ಅಥವಾ ಅದಕ್ಕಿಂತ ಹೆಚ್ಚಿನ ಇಂದ್ರಿಯಗಳ ನಿಗ್ರಹವಲ್ಲ, ಬದಲಾಗಿ ಆ ಎಲ್ಲ ಇಂದ್ರಿಯಗಳ ಮೇಲೆ ಸಂಪೂರ್ಣವಾದ ಹಿಡಿತವನ್ನು ಸಾಧಿಸುವುದು ಎಂದು ಅರ್ಥ. ಆ ಎರಡೂ ಸ್ಥಿತಿಗಳು ಮೂಲಭೂತವಾಗಿ ಸಂಪೂರ್ಣ ಭಿನ್ನ. ಇವತ್ತೇ ಈ ಕ್ಷಣವೇ ನಾನು ನನ್ನೆಲ್ಲ ಇಂದ್ರಿಯಗಳನ್ನು ನಿಗ್ರಹಿಸಬಹುದು, ಆದರೆ ಅವುಗಳನ್ನು ಜಯಿಸಲು ಗಣನಾತೀತವಾದ ಕಾಲವೇ ಬೇಕಾಗುತ್ತದೆ. ಗೆಲ್ಲುವುದು ಎಂದರೆ ಅವುಗಳನ್ನು ನನ್ನ ಸಿದ್ಧ ಗುಲಾಮರನ್ನಾಗಿ ಮಾಡಿಕೊಳ್ಳುವುದು. ಸರಳ ಮತ್ತು ನೋವುರಹಿತ ಆಪರೇಷನ್ ಮೂಲಕ ನಾನು ನನ್ನ ಕಿವಿಯ ತಮಟೆಯನ್ನು ಚುಚ್ಚಿಕೊಂಡು